## ಕರ್ನಾಟಕ ವಿಧಾನ ಪರಿಷತ್

## ಶ್ರೀ ತಿಪ್ಪಣ್ಣಪ್ಪ ಕಮಕನೂರ, ಮಾನ್ಯ ವಿಧಾನ ಪರಿಷತ್ ಸದಸ್ಯರು ಇವರು ನಿಯಮ 59 (ಶೂನ್ಯವೇಳೆ)ರಡಿ ನೀಡಿರುವ ಸೂಚನೆಗೆ ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಹೇಳಿಕೆ

**ಪ್ರಶ್ನೆ:-**

ಅರಬ್ಬಿ ಸಮುದ್ರದಲ್ಲಿ ಅವೈಜ್ಞಾನಿಕ ಲೈಟ್ ಫಿಶಿಂಗ್, ಬುಲ್ ಟ್ರಾಲ್ ಮೀನುಗಾರಿಕೆ ಸೇರಿ ಅಕ್ರಮ ಮೀನುಗಾರಿಕೆಯಿಂದಾಗಿ ಮೀನು ಮರಿ ಸಂತತಿ ನಾಶವಾಗುತ್ತಿರುವ ಹಿನ್ನೆಲೆಯಲ್ಲಿ ಸಾಂಪ್ರದಾಯಿಕ ನಾಡದೋಣಿ ಮೀನುಗಾರಿಕೆ ಕುಂಟಿತಗೊಂಡಿದೆ. ಇದರಿಂದಾಗಿ ಮೂರು ತಿಂಗಳ ಹಿಂದೆಯೇ ನಾಡದೋಣಿ ಮೀನುಗಾರಿಕೆ ಬಹುತೇಕ ಸ್ಥಗಿತಗೊಂಡಿದ್ದು ಬೋಟ್‌ಗಳನ್ನು ದಡದಲ್ಲಿ ಲಂಗರು ಹಾಕಿರುವ ಸಾಂಪ್ರದಾಯಿಕ ಮೀನುಗಾರರು, ಜೀವನನಿರ್ವಹಣೆಗಾಗಿ ಕೂಲಿ ಕೆಲಸದತ್ತ ಮುಖ ಮಾಡಿರುವುದು ಅತ್ಯಂತ ಶೋಚನೀಯ ಸಂಗತಿ.

ಲಕ್ಷಾಂತರ ರೂಪಾಯಿ ಬಂಡವಾಳ ಹಾಕಿ ಈ ಮೀನುಗಾರಿಕೆಯನ್ನೆ ನಂಬಿ ಜೀವನೋಪಾಯಕ್ಕೆ ನಾಡ ದೋಣಿ ಅವಲಂಬಿಸಿದ ನಮ್ಮ ಬಡ ಮೀನುಗಾರರು ಕೂಲಿ ಮಾಡುವ ಪರಿಸ್ಥಿತಿಗೆ ಬಂದುನಿಂತಿದ್ದಾರೆ. ಈ ನಾಡ ದೋಣಿಯನ್ನ ಅವಲಂಬಿಸಿದ ಮೀನುಗಾರರೂ ಸಹ ಕೆಲಸವಿಲ್ಲದೆ ಅಸಹಾಯಕ ಸ್ಥಿತಿಯಲ್ಲಿದ್ದಾರೆ. ಇವರಿಗೆ ಯಾವ ರೀತಿ ಸರ್ಕಾರ ಸಹಾಯಕ್ಕೆ ನಿಲ್ಲಬಹುದು ಎಂಬುದರ ಬಗ್ಗೆ ಗಂಭೀರವಾಗಿ ಚಿಂತಿಸಬೇಕಾಗಿದೆ ಮತ್ತು ಅತೀ ತುರ್ತಾಗಿ ಸರ್ಕಾರ ಇವರ ಸಹಾಯಕ್ಕೆ ಬರಬೇಕಾಗಿದೆ.

ಅಕ್ರಮ ಮೀನುಗಾರಿಕೆಯಿಂದಾಗಿ ಪ್ರಸಕ್ತ ಋತುವಿನಲ್ಲಿ ಮೂರು ಮೂರು ತಿಂಗಳು ಅವರು ಮೀನುಗಾರಿಕೆ ನಡೆಸಲು ಸಾದ್ಯವಾಗಲಿಲ್ಲ. ಈ ರೀತಿಯ ತೊಂದರೆಗಳ ಬಗ್ಗೆ ಮಂಗಳೂರಿನಿಂದ ಕಾರವಾರದ ತನಕ ಇರುವ ಎಲ್ಲಾ ನಾಡದೋಣಿ ಮೀನುಗಾರರು ಸಂಘಟಿತರಾಗಿ ಸಚಿವರು, ಸಂಬಂದಿಸಿದ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ ಈ ಬಗ್ಗೆ ತ್ರಾಸಿ ಬೀಚ್ ಬಳಿ ಅಂತರ್ ರಾಷ್ಟ್ರೀಯ ಹೆದ್ದಾರಿ ತಡೆ ನಡೆಸಿ ಹೋರಾಟ ಮಾಡಿದರೂ ಯಾವುದೇ ಪ್ರಯೋಜನ ಇವರಿಗೆ ಆಗಿಲ್ಲ. ಕಾರಣ ತುಳಿತಕ್ಕೆ ಒಳಗಾಗಿರುವವರನ್ನು ಮತ್ತೆ ತುಳಿಯುತ್ತಿದ್ದಾರೆ.

ಯಾಂತ್ರೀಕೃತ ಬೋಟ್ ಗಳು ಪದೇ ಪದೇ ತೀರ ಪ್ರದೇಶಕ್ಕೆ ಬಂದು ಮೀನುಗಾರಿಕೆ ನಡೆಸುವುದರಿಂದ ಹಾಗೂ ಲೈಟ್ ಫಿಶಿಂಗ್ ನಿಂದಾಗಿ ಮೀನಿನ ಸಂತತಿ ನಾಶವಾಗಿ ಸಾಂಪ್ರದಾಯಿಕ ಮೀನುಗಾರಿಕೆ ನಡೆಸುವ ಮಾಟುಬಲೆ, ಪಟ್ಟೆಬಲೆ, ಕಂತಬೆಲೆ, ಕೈರಂಪಣಿ ಮತ್ತು ಗಿಲ್‌ನೆಟ್ ಮೀನುಗಾರಿಕೆ ಮಾಡುವ ಮೀನುಗಾರರಿಗೆ ತುಂಬ ತೊದರೆಯಾಗಿದೆ. ಮುಂಬರುವ ವರ್ಷಗಳಲ್ಲಿ ಮತ್ಸ್ಯಕ್ಷಾಮ ಉಂಟಾಗಿ ಸಾಂಪ್ರದಾಯಿಕ ಮೀನುಗಾರಿಕೆಯನ್ನೆ ಅವಲಂಬಿಸಿಕೊಂಡಿರುವ ಲಕ್ಷಾಂತರ ನಾಡದೋಣಿ ಮೀನುಗಾರರು ಹಾಗೂ ಅವರ ಕುಟುಂಬದವರು ಬೀದಿಪಾಲಾಗುವ ಆತಂಕ ಉಂಟಾಗಿದೆ. ಕೇಂದ್ರ ಸರ್ಕಾರ 2017ರ ನವೆಂಬರ್ 10 ರಂದು ಬುಲ್‌ಟ್ರಾಲ್ ಹಾಗೂ ಲೈಟ್‌ಫಿಶಿಂಗ್ ನಿಷೇಧಿಸಿ ಆದೇಶ ಹೊರಡಿಸಿತ್ತು. ಆದರೆ ಇದರ ಪಾಲನೆ ನಮ್ಮ ಕರಾವಳಿಯಲ್ಲಿ ಆಗುತ್ತಿಲ್ಲ. ನಮ್ಮ ಸಮಾಜದವರನ್ನು ಕಂಡರೆ ಸರ್ಕಾರಕ್ಕೆ ಯಾಕಿಷ್ಟು ತಾತ್ಸಾರ. ಮೀನುಗಾರರು ಸಿಡಿದೇಳುವ ಮುನ್ನ ಇವರ ಎಲ್ಲಾ ಸಮಸ್ಯೆ ಬಗೆಹರಿಸಲು ಕ್ರಮ ಜರುಗಿಸಬೇಕೆಂದು ಮಾನ್ಯ ಮುಖ್ಯಮಂತ್ರಿಯವರಿಗೆ ಶೂನ್ಯವೇಳೆ ಮೂಲಕ ಗಮನ ಸೆಳೆಯ ಬಯಸುತ್ತೇನೆ.

**ಉತ್ತರ:-**

- ರಾಜ್ಯದಲ್ಲಿ 320 ಕಿ.ಮೀ ಕರಾವಳಿ ತೀರ ಪ್ರದೇಶವಿರುತ್ತದೆ. ರಾಜ್ಯದಲ್ಲಿ ನಾಡ ದೋಣಿಗಳು, ಮೋಟರೀಕೃತ ದೋಣಿಗಳು ಮತ್ತು ಯಾಂತ್ರೀಕೃತ ದೋಣಿಗಳು ಕಾರ್ಯಚರಿಸುತ್ತಲಿವೆ.
- ನಾಡದೋಣಿಗಳು ತೀರ ಪ್ರದೇಶದಿಂದ 5 ನಾಟಿಕಲ್ ಮೈಲ್ (9 ಕಿ.ಮೀ.)ವರೆಗೆ ಕಾರ್ಯಚರಿಸಬೇಕಾಗಿರುತ್ತದೆ.

- ಮೋಟರೀಕೃತ ದೋಣಿಗಳು ಮತ್ತು ಯಾಂತ್ರೀಕೃತ ದೋಣಿಗಳು 5 ನಾಟಿಕಲ್ ಮೈಲ್ (9 ಕಿ.ಮೀ.) ನಿಂದ ಮೀನುಗಾರಿಕೆ ಮಾಡಬೇಕಾಗಿರುತ್ತದೆ.
- ಅವೈಜ್ಞಾನಿಕ ಮಾದರಿಯ ಮೀನುಗಾರಿಕೆ ಪದ್ಧತಿಗಳಾದ ಬೆಳಕು ಮೀನುಗಾರಿಕೆ ಮತ್ತು ಬುಲ್ ಟ್ರಾಲ್ ಮೀನುಗಾರಿಕೆಯನ್ನು ನಿಷೇಧಿಸಿ ದಿನಾಂಕ: 30/01/2021 ರಂದು ಸರ್ಕಾರಿ ಆದೇಶ ಹೊರಡಿಸಲಾಗಿದೆ.
- ಸರ್ಕಾರವು ಎಲ್ಲಾ ಮೀನುಗಾರರನ್ನು ಸಮಾನವಾಗಿ ಪರಿಗಣಿಸಿ ಅವರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಸರ್ಕಾರ ಕ್ರಮವಹಿಸುತ್ತಲಿದೆ.
- ನಾಡದೋಣಿ / ಸಾಂಪ್ರದಾಯಿಕ ಮೀನುಗಾರರಿಗೆ ಅನುಕೂಲ ಮಾಡಿಕೊಡುವ ದೃಷ್ಠಿಯಿಂದ ರಾಜ್ಯದ 56 ಸ್ಥಳಗಳಲ್ಲಿ ಕೃತಕ ಬಂಡೆಸಾಲುಗಳನ್ನು ಅಳವಡಿಸಲು ಯೋಜನೆ ತಯಾರಿಸಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.
- ಮೋಟರೀಕೃತ ನಾಡದೋಣಿಗಳು ಎದುರಿಸುತ್ತಿದ್ದ, ಸೀಮೆಎಣ್ಣೆ ಸಮಸ್ಯೆಯನ್ನು ಶಾಶ್ವತವಾಗಿ ಬಗೆಹರಿಸಿ ರೂ.35/- ರಿಯಾಯಿತಿ ದರದಲ್ಲಿ ಕೈಗಾರಿಕೆ ಸೀಮೆ ಎಣ್ಣೆಯನ್ನು ಸರಬರಾಜು ಮಾಡಲಾಗುತ್ತಿದೆ.
- ಭವಿಷ್ಯದ ದೃಷ್ಠಿಯಿಂದ ಮತ್ತು ಮುಂದಿನ ಪೀಳಿಗೆಗಳ ಹಿತದೃಷ್ಠಿಯಿಂದ ನಿಷೇಧಿತ ಮೀನುಗಾರಿಕೆ ಪದ್ಧತಿಗಳನ್ನು ಮಾಡದಂತೆ ಮೀನುಗಾರರಲ್ಲಿ ಜಾಗೃತಿ ಮೂಡಿಸಲು ಇಲಾಖೆಯಿಂದ ಕ್ರಮವಹಿಸಲಾಗುತ್ತಿದೆ.

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

ಸಂಖ್ಯೆ: ಪಸಂಮೀ ಇ-82 ಮೀಇಯೋ 2025